† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ನಾನು ಒಂದು ಕಾಲ್ ಅಟೆನ್‌ಷನ್ ಮೋಷನ್ ಕಳುಹಿಸಿದ್ದೆ. ಹುಬ್ಬಳ್ಳಿಯ ಹೈಸ್ಕೂಲು ವಿದ್ಯಾರ್ಥಿಗಳ ಮುಷ್ಕರದ ವಿಚಾರದಲ್ಲಿ ಕಳಿಸಿದ ಆ ಮೋಷನ್ ಏಚಾರವೇನಾಯಿತು ?

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ನಾನು ಒಂದು ಕ್ರಿಯಾಲೋಪವನ್ನು ಸೂಚಿಸಬೇಕಾಗಿದೆ. ಈ ಸಭೆಯಲ್ಲಿ ಸಾಮಾನ್ಯವಾಗಿ ಕೆಲವು ಸಂತಾಪ ಸೂಚಕ ನಿರ್ಣಯಗಳ ಪ್ರಸ್ತಾಪ ಮಾಡುವುದುಂಟು. ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪಣಿಕ್ಕರ್‌ರವರು ನಿಧನರಾದರು. ಅದಕ್ಕಿಂತ ಕೆಲವು ದಿವಸಗಳ ಮುಂಚೆ ಹುಕ್ಕೇರಿಕರ್ ರಾಮರಾಯರು ನಿಧನರಾದರು. ಈ ಎರಡರ ಬಗ್ಗೆ ಈ ಸಭೆಯಲ್ಲಿ ತಾವಾಗಲಿ, ಸರ್ಕಾರವಾಗಲಿ, ಸದಸ್ಯರಾಗಲಿ ಯಾರೂ ದುಃಖಸೂಚಕ ನಿರ್ಣಯ ಪ್ರಸ್ತಾಪ ಮಾಡಲಿಲ್ಲ. ನಾನು ಈ ವಿಷಯದ ಬಗ್ಗೆ ಸಾಕಾದಷ್ಟು ಪರಿಶೀಲಿಸಿದ ನಂತರ ಒಂದು ತೀರ್ಮಾನಕ್ಕೆ ಬಂದಿದ್ದೇನೆ.

ಅಧ್ಯಕ್ಷರು.—ಆ ವಿಷಯವನ್ನು ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಹೇಳಬಹುದಾಗಿತ್ತು.

ಶ್ರೀ ಎಸ್. ಗೋಪಾಲಗೌಡ.—ಸಂತಾಪ ಸೂಚಿಸದಿದ್ದರೆ ತೀವ್ರತರವಾದ ಕರ್ತವ್ಯ ಲೋಪವಾದೀತೆಂದು ನನಗನ್ನಿಸುತ್ತದೆ. ಮತ್ತು ಈ ಸಭೆಯಲ್ಲಿ ಸಂತಾಪ ಸೂಚಕ ನಿರ್ಣಯಗಳನ್ನು ತರುವಾಗ ನಿಯಮವೇನಾದರೂ ಇರಬೇಕು. ಯಾರಾದರೂ ನಿಧನರಾದಾಗ ಈ ಸಭೆ ಸಂತಾಪ ಸೂಚಿಸುವ ಬಗ್ಗೆ ಗೊತ್ತಾದ ನಿಯಮಗಳನ್ನು ಪರಿಪಾಲನೆ ಮಾಡಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಸಭೆಯ ನಡವಳಿಕೆಯಲ್ಲಿ ಕ್ರಿಯಾಲೋಪವುಂಟಾಗಿದೆಯೆಂದು ಭಾವಿಸುತ್ತೇನೆ. ತಾವು ಈಗಲಾದರೂ ಸಭೆಯ ಪರವಾಗಿ ಸಂತಾಪ ಸೂಚಕ ನಿರ್ಣಯಗಳನ್ನು ತರಬಹುದು. ಮತ್ತು ಮುಂದೆ ಇಂಥ ಲೋಪಗಳಾಗದಿರುವಂತೆ ನೋಡಿಕೊಳ್ಳುವುದು ಒಳ್ಳೆಯದೆಂದು ಕಾಣುತ್ತದೆ. ಇದರ ಬಗೆ. ನಾನು ತಮ್ಮ ತೀರ್ಮಾನವನ್ನು ಅಪೇಕ್ಷಿಸುತ್ತೇನೆ.

Mr. SPEAKER.—If the hon'ble Member does not know what a point of order is, I must really say that it is a very unwise step that he has taken. If he knows, it should not have been raised at all in this form. Points of orders related to any violation of the orders in force. He is not able to say if there is any breach. If there is anything like what the hon'ble Member says, then it is a mere convention. If it is a convention, he should have ascertained it. Even if a convention has been violated, he should come and tell me. But to put it in the shape of a point of order, is not proper and it is highly irregular.

ಶ್ರೀ ಎಸ್. ಗೋಪಾಲ ಗೌಡ.—ಅನೇಕ ಸಲ ಒಂದು ಸಂಪ್ರದಾಯ ಎಂದು ಹೇಳುವುದು ರೂಲ್ಸ್ ರೂಪ ತಾಳುತ್ತದೆ. ಅದನ್ನು ಮುರಿದಾಗಲೂ ರೂಲ್ಸ್ ಮುರಿದಷ್ಟೇ ಕ್ರಿಯಾಲೋಪವಾಗುತ್ತದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ರೂಲ್ಸ್‌ನಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಯಾರು ತರಬೇಕು, ಯಾವಾಗ ತರಬೇಕು, ಯಾರ ಬಗ್ಗೆ ತರಬೇಕು ಎಂದು ಗೊತ್ತುಮಾಡುವುದನ್ನು ತಮ್ಮ ಮತ್ತು ಸಭೆಯ ವಿವೇಚನೆಗೆ ಬಿಡಲಾಗಿದೆ. ನನ್ನ ಅಭಿಪ್ರಾಯದಲ್ಲಿ ಕನ್‌ವೆನ್‌ಷನ್ ಕೂಡ ರೂಲ್ಸ್ ಜೊತೆಗೇ ಬರುತ್ತದೆ. ಈ ಸಭೆಯ ಕನ್‌ವೆನ್‌ಷನ್‌ಗಳನ್ನು ರೂಲ್ಸ್‌ನಲ್ಲೇ ಅಡಕಮಾಡಬೇಕು.

Mr. SPEAKER.—Then the hon'ble Member has first to suggest an amendment to the rules and then proceed. Will he kindly mention the convention as he understands it ?

ಶ್ರೀ ಎಸ್. ಗೋಪಾಲ ಗೌಡ.—ಸಂತಾಪ ಸೂಚನೆ ಮಾಡುವ ಕನ್‌ವೆನ್‌ಷನ್ ಇದೆ. ರಾಜ್ಯ ಸಭೆಯಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಶ್ರೀಮಾನ್ ಪಣಿಕ್ಕರ್ ಅವರ ಸಂತಾಪ ಸೂಚನೆಗೆ ರೆಫರೆನ್ಸ್ ಬಂದಿದೆ. ಅವರು ನಮ್ಮ ರಾಜ್ಯದ ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಗಳಾಗಿದ್ದರು. ಹೀಗಿದ್ದರೂ ಕೂಡ ಅವರ ಸಂತಾಪ ಸೂಚನೆಯ ವಿಷಯವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಲಿಲ್ಲ ಎಂದು ಹೇಳಿದಾಗ ಅದು ಒಂದು ಕ್ರಿಯಾಲೋಪವಾಗುತ್ತದೆ. ನಾವು ನಮ್ಮ ಕರ್ತವ್ಯವನ್ನು ಮಾಡಲಿಲ್ಲ ಎಂದಾಗುತ್ತದೆ.

Mr. SPEAKER.—The convention is in respect of Members when they are members of the Assembly and during the period of tenure if their death takes place, then it is perfectly in order to make a reference.

Similarly, in the case of ex-members of this Assembly, it has been done. That is the only criterion so far as members are concerned. The Hon'ble Member Sri Gopala Gowda must remember that Sri Panikkar was a member of the Constituent Assembly to which the Lok Sabha has succeeded. He was a Member of the Council of States to which the Rajya Sabha has succeeded. It has been mentioned that he was a valued Member of these two institutions. That is exactly why so far as my friend Sri Hookerikar was concerned also, I could not make a reference. Not that I was unwilling. But having regard to the Rules, we could not. Most of us were anxious. There are many patriots all over the country. That is the convention till now, and will have followed that convention. If the Members think that it should be done, then they should followed proper procedure. But it is not correct to raise a point of order regarding this matter and I tell the Hon'ble Member, he is entirely wrong.

Sri V. M. DEO (Gubbi).—How was this Assembly concerned with Kennedy, Sir ?

Mr. SPEAKER.—Kings, Heads of States.....

Sri .C. J. MUCKANNAPPA (Sira).—I wanted to bring to the notice of the Chair that a mistake is committed.

Mr. SPEAKER.—I have condoned it even before the hon'ble member has told me.

ಶ್ರೀ ಎಸ್. ಶಿವಪ್ಪ.—ಒಂದು ವಿಶೇಷ ಪರಿಸ್ಥಿತಿ ಉಂಟಾಗಿರತಕ್ಕ ವಿಷಯವನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಹಿಂದಿನ ಅಸೆಂಬ್ಲಿ ಮೀಟಿಂಗ್ ನಡೆದ ಮೇಲೆ ಈ ಸಾರಿ ಅಸೆಂಬ್ಲಿ ಮೀಟಿಂಗ್ ಸೇರುವುದಕ್ಕೆ ಮಧ್ಯೆ ಒಂದು ವಿಶೇಷವಾದ ಪರಿಸ್ಥಿತಿ ಉಂಟಾಗಿದೆ. ಅದರ ಬಗ್ಗೆ ನಮ್ಮ ಸಂಸ್ಥಾನದ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

Mr. SPEAKER.—I suppose the hon'ble member has written to me a letter and the matter is pending.

ಶ್ರೀ ಎಸ್. ಶಿವಪ್ಪ.—ಹಿಂದಿನ ಅಸೆಂಬ್ಲಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ವಾಗ್ದಾನ ಕೊಟ್ಟಿದ್ದಾರೆ.

Mr. SPEAKER.—I am trying to give the utmost respect to Sri Sivappa as Leader of the opposition. I am trying to see what is to be done. Will he listen to me ?

Sri S. SIVAPPA.—The Session is almost coming to an end and the Chief Minister is going away on election tour. How can we expect a statement from him ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಒಂದು ಪುಸ್ತಕವನ್ನು ತೆಗೆದುಕೊಂಡು ಬಂದಿದ್ದೇನೆ. ಈಗ ನಾನು ತಮ್ಮ ಪರ್ಮಿಷನ್ ತೆಗೆದುಕೊಂಡು ಆ ಪುಸ್ತಕದಲ್ಲಿರತಕ್ಕ ಕೆಲವು ಪ್ಯಾರಾಗಳನ್ನು ಈ ಸಭೆಯ ಮುಂದೆ ಓದಬೇಕಾಗಿದೆ. ಈ ಪುಸ್ತಕವನ್ನು ಯಾರೋ ಒಬ್ಬರು ನನ್ನ ಕೈಗೆ ಕೊಟ್ಟರು. ಈ ಪುಸ್ತಕವನ್ನು ಬಿ.ಎ. ಡಿಗ್ರಿ ಕ್ಲಾಸಿಗೆ ಇಟ್ಟಿದ್ದಾರೆ. ಈ ಪುಸ್ತಕದಲ್ಲಿ ಹೆಣ್ಣು ಮಕ್ಕಳನ್ನು ಅವಹೇಳನ ಮಾಡತಕ್ಕ ವಿಷಯಗಳು ಇವೆ. ಅದರಲ್ಲಿರತಕ್ಕ ಕೆಲವು ಪ್ಯಾರಾಗಳನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಅದಕ್ಕೋಸ್ಕರ ತಮ್ಮ ಪರ್ಮಿಷನ್ ಕೇಳುತ್ತಿದ್ದೇನೆ.

Mr. SPEAKER.—I thought the Member was going to apologise to the House for a serious offence committed by him.

Sri C. J. MUCKANNAPPA.—Because you have said that before raising any matter here, I should consult you before hand, I am bringin

(SRI C. J. MUCKANNAPPA)

it to your notice. ಆದ್ದರಿಂದ ಈಗ ಆ ಪುಸ್ತಕದಲ್ಲಿರತಕ್ಕ ಕೆಲವು ವ್ಯಾರಾಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ತಾವು ನನಗೆ ಅಪ್ಪಣೆಯನ್ನು ಕೊಡಬೇಕು.

Mr. SPEAKER.—Not now.

Sri C. J. MUCKANNAPPA.—Tomorrow ?

Mr. SPEAKER.—We shall see.

PAPERS LAID ON THE TABLE.

Sri R. M. PATIL (Minister for Home).—Sir, I beg to lay on the Table of the House :

1. Notification No. HD 150 TMT 62 dated 6th November 1963 (Reduction of Tax payable) ;
2. Notification No. HD 150 TMT 62 dated 7th November 1963 (Amendments to the Notification No. HD 39 TMT 62, dated 19th October 1962) ;

as required under sub-seetion (2) of section 16 of the Mysore Motor Vehicles Taxation Act, 1957.

MYSORE MOTOR VEHICLES (TAXATION ON PASSENGERS AND GOODS) (AMENDMENT) BILL, 1962.

Motion to consider.

Sri R. M. PATIL (Minister for Home).—Sir, I beg to move :

"That the Mysore Motor Vehicles (Taxation on Passengers and Goods) (Amendment) Bill, 1962, be taken into consideration."

Mr. SPEAKER.—Motion moved :

"That the Mysore Motor Vehicles (Taxation on Passengers and Goods) (Amendment) Bill, 1962, be taken into consideration."

† Sri R. M. PATIL.—Sir, this is an amendment proposed in order to augment the resources of the State in order to meet the expenditure to be incurred in the Third Five Year Plan. The Statement of Objects and Reasons under this Heading has been mentioned : 'due to the tempo of the Third Five Year Plan additional resources have to be found for meeting the increased expenditure that has been incurred to fulfil the financial and physical targets fixed in the Plan. Therefore it is proposed to increase the rate of taxation under the Motor Vehicles Tax on passengers and goods Act keeping in view the rates prevailing in the neighbouring States. Hence the Bill.